ಒಳಗೆ ಬಿಟ್ಟು ಸಮಸ್ಯೆಯನ್ನು ಸೃಷ್ಟಿಸುತ್ತಿ. ಅವನು ಬೌದ್ಧನಾಗಿದ್ದರೊಂದೆ ಸಾಕು ಎಲ್ಲದಕ್ಕೂ ವಿನಾಯಿತಿ.'

ಮಹಾರಾಜರತ್ತ ಹೊರಳಿ, 'ಮಹಾರಾಜರೇ ನಿಮಗೆ ಇದು ಅರ್ಥವಾಗಲಿಲ್ಲ. ಅವನು ಯಾರೆಂದು ನಿಮಗೆ ತಿಳಿಯಿತೇ?'

'ಇಲ್ಲ.'

'ಅವನು ನಿಮ್ಮ ಮಗ. ಈಗ ಮೌರ್ಯ ಕುಲದ ನಿಮ್ಮ ನಂತರ ಸಿಂಹಾಸನಕ್ಕೆ ಬಾಧ್ಯನಾದವನು.'

ಅಸಾಂಧಿಮಿತ್ರೆ ಅಪಾರ ಬುದ್ಧಿಮತ್ತೆ ಇರುವ ರಾಣಿ ಎನ್ನುವುದು ಮಹಾರಾಜ ಅಶೋಕರಿಗೆ ಗೊತ್ತು. ಅದಕ್ಕಾಗಿ ಮೌರ್ಯ ಸಾಮ್ರಾಜ್ಯದ ಗೂಢಚಾರ ವಿಭಾಗದ ನೇತೃತ್ವ ವಹಿಸಿಕೊಂಡವಳು.

ಈಗ ಮಹಾರಾಜರಿಗೆ ಗಾಬರಿಯಾಯಿತು. ಸಂಘಮಿತ್ರೆ, ಮಹೀಂದ್ರ ಮತ್ತೆ ಕುನಾಲ್ ಜಪಾಕ, ತಿವಾರ ಚಾರುಮತಿ- ಇವರಲ್ಲವೇ ತನ್ನ ಮಕ್ಕಳು? ತನ್ನ ಜೊತೆ ಜಗಳ ಮಾಡಿಕೊಂಡು ಕುರುಡನಾಗಿ ಹೋದ ಕುನಾಲ ಒಬ್ಬನೇ ತಮ್ಮಿಂದ ದೂರವಾದವನು. ಅವನಂತೂ ಇವನಲ್ಲ.

ಅಸಾಂಧಿ ಮಾತುಗಳು ನಿಖರ ಪ್ರಖರವಾಗಿ ಇರುತ್ತವೆ ಎಂಬುವುದು ದಿಟ; ಆದರೆ, ಈ ಬಾಲಕ ಖಂಡಿತಾ ತನ್ನ ಮಗನಲ್ಲ ಎಂದು ಮನ ಹೇಳುತ್ತಲೇ ಇತ್ತು.

ಆಗಲೇ ಮಧ್ಯರಾತ್ರಿ ಕಳೆದು ಮುಂಜಾವು ಮಂಜು ಕೆಡವಲು ಸಜ್ಜಾಗಿತ್ತು. ಹೊರಗಡೆ ಇರುವ ದೇವದಾರು ಮರಗಳಲ್ಲಿ ಒಂದೇಸಮ ಕೋಗಿಲೆ, ಮನೆಗಳಲ್ಲಿ ಕೋಳಿಗಳು ಕೂಗುತ್ತಲೇ ಇದ್ದವು.

ಅಶೋಕನಿಗೆ ಇನ್ನೂ ಕುತೂಹಲ ಹೆಚ್ಚಾಯಿತು. ಅಸಾಂಧಿ ದಯವಿಟ್ಟು ಇವನು ಯಾರು? ಹೇಳು, ಅಸಾಂಧಿಮಿತ್ರಳಿಗೆ ಬಹಳ ಹೊತ್ತು ಇದನ್ನು ಹಿಡಿದಿಟ್ಟುಕೊಳ್ಳಲು ಆಗಲಿಲ್ಲ. ಈತ ನಿಮ್ಮ ಅಣ್ಣ ಸುಶೀಮನ ಮಗ ನಿಗ್ರೋಧ. ಕೋಸಲೆಯ ಬೌದ್ಧ ಆಶ್ರಮದಲ್ಲಿ ಬೆಳೆದು ಇಲ್ಲಿಗೆ ಬಂದಿದ್ದಾನೆ. ಆತನ ಇನ್ನೊಂದು ಹೆಸರು ಬೌದ್ಧ ಬಾಲಗುರು ನಿಗ್ರೋಧ ದಮ್ಮ. ಅಶೋಕ ಚಕ್ರವರ್ತಿಗೆ ಆಶ್ಚರ್ಯ, ಸಂತಸ, ಭಯ ಎಲ್ಲವೂ ಒಮ್ಮೆಲೇ ಉಕ್ಕಿ ಬಂತು. 'ಹೌದಾ... ನನ್ನಣ್ಣ ಸುಶೀಮನ ಮಗನೇ. ಶಿವನೇ' ಎಂದು ದಢದಢನೆ, ಅವನು ಮಲಗಿದ್ದ ವರಾಂಡದ ಅಂಗಳಕ್ಕೆ ಬಂದು ನಿಂತು ಆಕಾಶಾಭಿಮುಖವಾಗಿ ಅನುಲೋಮ ಭೂಷಿತ ಕ್ರಿಯೆಯಿಂದ ಮಲಗಿದ್ದ ಈ ಮಗುವನ್ನು ನೋಡುತ್ತಲೇ ನಿಂತ. ಆಗತಾನೇ ತಾಯಿಯ ಹಾಲು ಕುಡಿದು ಮಲಗಿ ನಿದ್ರೆಯಲ್ಲಿ ಕಂಡ ಕನಸಿಗೆ ಪ್ರತಿಕ್ರಿಯಿಸುತ್ತಾನೆ ಎಂಬಂತೆ ನಿಗ್ರೋಧ ನಗುತ್ತಲೇ ಮಲಗಿದ್ದ.

ಅಶೋಕನಿಗೆ ಅವನನ್ನು ಅನಾಮತ್ತು ಎತ್ತಿಕೊಂಡು ಹೋಗಿ ರಾಜ ಶಯ್ಯಾಗೃಹದಲ್ಲಿ ಮಲಗಿಸಬೇಕು ಎಂದೆನಿಸಿತು. ಅಸಾಂಧಿಮಿತ್ರಳೇ 'ಅದಕ್ಕಾಗಿ ನೀವು ಕಾಯಬೇಕು. ಈಗ ಅವಸರ ಬೇಡ' ಎಂದು ತಡೆದು ನಿಲ್ಲಿಸಿದಳು. ದೇವಿಯಂತೂ ಸಂತಸದಿಂದ ಕುಣಿದಾಡಿದಳು. ಅಕ್ಕ ಚಂದಾಳ ಮಗ ಮಾವ ಸುಶೀಮನ ಮಗ ಮರಳಿ ತನ್ನ ಜಾಗಕ್ಕೆ ಬಂದದ್ದು ಅವಳಿಗೆ ಸಂತಸವಾಗಿತ್ತು. ಆದರೆ, ಗೂಢಚಾರ ಮನ ಹೊಂದಿದ್ದ ಅಸಾಂಧಿಮಿತ್ರಳು ಯಾವುದನ್ನು ಬಹುಬೇಗನೆ ನಂಬುವ, ಮನನ ಮಾಡಿಕೊಳ್ಳುವವಳಲ್ಲ. ಹೀಗೆ ಭಾವನಾತ್ಮಕವಾಗಿ ಅಪ್ಪಿ ಮುದ್ದಾಡುವುದರಿಂದ ಬಹುವಾಗಿ ದೂರವೇ ಉಳಿದವಳು. ಎರಡನೆ ರಾಣಿ ದೇವಿ ಇಲ್ಲೇ ಪವಡಿಸಿದ್ದರಿಂದ ಮಹಾರಾಜರು ಇಂದು ಅಸಾಂಧಿಮಿತ್ರಳ ಜೊತೆ ಕಾಲ ಕಳೆಯಲು ಆಕೆಯ ಅರಮನೆ ಪ್ರವೇಶಿಸಿದರು.

ಮನೋಭೂಮಿಕೆಯಲ್ಲಿ ವಿಚಿತ್ರ ತಳಮಳ. ಚೈತ್ರ ಮುಗಿದು ಕಾಲ ಬದಲಾಗಿತ್ತು. ವೈಶಾಖದ ಕಾಲ ಸಮುದ್ರ ಉಕ್ಕೇರುವ ಕಾಲ. ಅದರಂತೆ ಅಶೋಕ ಚಕ್ರವರ್ತಿಯ ಆ ಅರಮನೆಯ ಅಂತಃಪುರದಲ್ಲಿ ಎಷ್ಟು ನೀರು ಕುಡಿದರೋ ತಳಮಳಿಸಿದರೋ ಯಾರಿಗೆ ಗೊತ್ತು, ಆಮೇಲೂ ಪೂರ್ಣಚಂದ್ರನಂತಿರುವ ಆ ಬಾಲಕನನ್ನು ನೋಡಬೇಕೆನಿಸಿತು. ಮತ್ತು ಅಂತಃಪುರದಿಂದ ಆ ಬಾಲಕ ಮಲಗಿದ್ದ ವರಾಂಡಕ್ಕೆ ಬಂದು ನಿಂತರು. ಕರುಳು ಚುರ್ ಎಂದಿತು. ಇಡೀ ಭರತ ಖಂಡದ ಉತ್ತರಾಧಿಕಾರಿಯಾಗಬೇಕಾದವನು ಹೀಗೆ ಬರೀ ಮೈಯ್ಯಲ್ಲಿ ನೆಲದ ಮೇಲೆ ಮಲಗಿದ್ದು ನೋಡಿ ಶಿವನೇ ಎಂದು ಪರಿತಪಿಸಿದರು. ಅವನ ಮುಂದೆ ಕುಳಿತುಕೊಳ್ಳಬೇಕೆನಿಸಿತು. ಅಲ್ಲಿಯೇ ಕುಳಿತುಕೊಂಡರು. ತಾಸುಗಟ್ಟಲೇ ಆತನನ್ನು ನೋಡುತ್ತಾ ಕುಳಿತರು. ದೇವಿಯೇ ಬಂದು, 'ನೀವು